ಪದಬಂಧ



### ಎಡದಿಂದ ಬಲಕ್ಕೆ

1. ಸರಹದ್ದನ್ನು ಗುರುತಿಸಲು ಸೂಕ್ತನಾದವ ಆಕೆಯ ತಮ್ಮ 4
3. ಗದ್ದೆ ಪ್ರದೇಶದ ಮುಂದೆಯೇ ಇದೆ ಧಾನ್ಯ ಸಂಗ್ರಹಾಗಾರ 3
4. ಸುಮಾರಾಗಿ ಕವಲು ಕೊಂಬಿನ ಪ್ರಾಣಿಯ ಹೆಸರನ್ನೇ ಹೋಲುವ ತಂತಿವಾದ್ಯ? 3
6. ಬಲಗೈಯನ್ನು ಬಳಸುವಾಗಲೆಲ್ಲ ಸಮಯದ್ದೇ ಹೆದರಿಕೆ 4
7. ಹಣ್ಣಾಗಿಸುವ ಕೆಲಸಕ್ಕೆ ಎಲ್ಲವನ್ನೂ ಸಿದ್ಧಪಡಿಸಿಕೋ 4
9. ಅದ್ಭುತವಾಗಿ ನೃತ್ಯ ಮಾಡುತ್ತಿರುವವ ಒಬ್ಬ ಶ್ರೇಷ್ಠ ಮನುಷ್ಯ 4
12. ನಿಧಾನ ನಡಿಗೆಗೆ ತಕ್ಕ ಪ್ರಸಿದ್ಧ ಹೋಲಿಕೆ 4
14. ಕ್ರೌರ್ಯವನ್ನೆಲ್ಲ ಮೈಗೂಡಿಸಿಕೊಂಡ ಶಿಕ್ಷಾ ತಾಣ 3
15. ವೈಭವವಾದದ್ದೇನೇ ಇರಲಿ, ಅದರೊಡನೆ ಗಾಢ ಮನೋಬಂಧ 3
16. ರಾಣಿಗೆ ರಂಗು ಏರಚಿದ್ದಕ್ಕೆ ಯುದ್ಧ ಭೂಮಿಯೇ ಸೃಷ್ಟಿಯಾಯಿತು 4

### ಮೇಲಿಂದ ಕೆಳಕ್ಕೆ

1. ಸಂಪ್ರದಾಯಗಳನ್ನೆಲ್ಲ ಪಾಲಿಸುತ್ತದೆ ಈ ಇಡೀ ಸಮೂಹ 4
2. ರಸ ತುಂಬಿ ಹಸಿರಾಗಿದೆ ಎಲ್ಲ ಗಿಡ ಮರ 4
3. ಭೂ ಗೋಳದ ಸಕಲ ಹಸು ಕರುಗಳನ್ನೂ ಕಾಯುವವ ಕೃಷ್ಣ ತಾನೇ? 3
5. ಆತ ಗುರಾಣಿ ಹಿಡಿದು ಹೋದದ್ದು ಹಿಟ್ಟು ಮಾಡುವ ಮಿಲ್ಲು 3
6. ರಸ್ತೆ ಕೊರಕಲಿನ ಪರಿಶೀಲನಿಗೆ ಗುಮಾಸ್ತನನ್ನು ಕಳುಹುವುದೇ? 4
8. ಸುರಂಗವನ್ನು ದಾಟಿದ ಶೂರನಿಗೆ ಸಿಕ್ಕಿತು ದೇವತೆಯ ಸ್ನೇಹ 4
10. ರಾಧಾಕೃಷ್ಣನ ದರ್ಶನ ಒದಗಲಿಲ್ಲವೆಂದು ಭಾರೀ ಅಳು 3
11. ಮಕರಂದ ಸೇವಿಸಲು ಹ್‌ಆರಿ ಬಂದದ್ದು ಈ ದುಂಬಿ 4
12. ಅಭ್ಯಾಗತನಾಗಿ ಬಂದವ ಆಸೆಯಿಂದ ಪೀಡಿಸುತ್ತಿರುವುದು ನಗ ನಾಣ್ಯಗಳಲ್ಲಿ ಪಾಲು 4
13. ಗೋವಿಂದನ ಕೃಪೆ ಸಿಗಲಿಲ್ಲವೆಂದು ಹೀಗೆ ನೋವು 3

---

## 25—04—2024 ಉತ್ತರಗಳು

### ಎಡದಿಂದ ಬಲಕ್ಕೆ

1. ಅಂಧಕಾರ3. ಕಾಳಜಿ 4. ಹನನ 6. ಸುಮಸಸ್ಯ 7. ನೆನೆಸು 9. ಆಕರ 11. ತಯಾರು 13. ಕಮಲ 15. ಉದಾಸೀನ 17. ಕನಸು 18. ವಿಹಾರ 19. ಕುರುಚಲು

### ಮೇಲಿನಿಂದ ಕೆಳಕ್ಕೆ

1. ಅಂಜಿಸು 2. ರಹಸ್ಯ 3. ಕಾಮನೆ 5. ನಡುಕ 7. ನೆಗೆತ 8. ಸುಮಾರು 9. ಆತಂಕ 10. ರಸಾಲ 11. ಯಾತ್ರಿಕ 14. ಮಧುರ 15. ಉಸುಕು 16. ನವಿಲು

ಪ್ರಶ್ನಾಂಕಣ

# ಹಿಮನದಿ: ಎಲ್ಲೆಲ್ಲಿ ಎಷ್ಟೆಷ್ಟು?

ಹಿಮಾಲಯ, ಆಂಡಿಸ್, ಆಲ್ಪ್ಸ್, ಇತ್ಯಾದಿ ಅತ್ಯುನ್ನತ ಪರ್ವತ ಪ್ರದೇಶಗಳಲ್ಲಿ ಹಾಗೂ ಅಂಟಾರ್ಕ್ಟಿಕಾ, ಗ್ರೀನ್‌ಲ್ಯಾಂಡ್ ಇತ್ಯಾದಿ ಶಾಶ್ವತ ಶೀತ ಮುಸುಕಿದ ನೆಲ ಪ್ರದೇಶಗಳಲ್ಲಿ ಹತ್ತಾರು ಸಾವಿರ ವರ್ಷಗಳಿಂದ, ಸಾವಿರಾರು ಚದರ ಕಿ.ಮೀ. ವಿಸ್ತಾರಕ್ಕೆ ಸಂಗ್ರಹವಾಗಿ, ಬಂಡೆಯಂತೆ ಗಟ್ಟಿಯಾಗಿ, ತುಂಬ ನಿಧಾನವಾಗಿ ಜರುಗುವ ಬೃಹತ್ ಹಿಮರಾಶಿಗಳೇ ಹಿಮನದಿಗಳು.

ಸುಮಾರು 60 ದಶಲಕ್ಷ ವರ್ಷ ಹಿಂದೆ ಅವತರಿಸಿ, ಭೂ ಮೇಲ್ಮೈನ ಪ್ರಧಾನ ಲಕ್ಷಣಗಳಲ್ಲೊಂದಾಗಿರುವ ಹಿಮನದಿಗಳಲ್ಲಿ ಪ್ರಧಾನವಾಗಿ ಎರಡು ವಿಧಗಳಿವೆ: ಆಲ್ಪೈನ್ ಹಿಮನದಿಗಳು ಮತ್ತು ಕಾಂಟಿನೆಂಟಲ್ ಹಿಮನದಿಗಳು. ಪರ್ವತ ಪ್ರದೇಶಗಳ ಇಳಿಕಲುಗಳಲ್ಲಿ ಮತ್ತು ಪರ್ವತ ಕಣಿವೆಗಳಲ್ಲಿ ಮೈದಳೆವ (ಚಿತ್ರಗಳಲ್ಲಿ ನೋಡಿ ) ಹಿಮನದಿಗಳು ಆಲ್ಪೈನ್ ಹಿಮನದಿಗಳಾದರೆ ವಿಶಾಲ ಬಯಲುಗಳಂತಹ ಪ್ರದೇಶಗಳಲ್ಲಿ ರೂಪುಗೊಳ್ಳುವ ಹಿಮನದಿಗಳೇ ಕಾಂಟಿನೆಂಟಲ್ ಹಿಮನದಿಗಳು. ಜಗತ್ತಿನಲ್ಲಿರುವ ಹಿಮನದಿಗಳ ಒಟ್ಟು ಸಂಖ್ಯೆ ಎರಡು ಲಕ್ಷ. ಇಷ್ಟೂ ಹಿಮನದಿಗಳು ಧರೆಯ ಒಟ್ಟು ನೆಲದ ಶೇಕಡ 10ರಷ್ಟು ಪ್ರದೇಶವನ್ನು ಆವರಿಸಿವೆ. ಧರೆಯ ಸಕಲ ಹಿಮನದಿಗಳ ಒಟ್ಟು ವಿಸ್ತಾರ ಸುಮಾರು 15 ದಶಲಕ್ಷ ಚದರ ಕಿ.ಮೀ. ವಿಸ್ಮಯ ಏನೆಂದರೆ, ಧರೆಯಲ್ಲಿರುವ ಒಟ್ಟು ಶುದ್ಧ ನೀರಿನ ಶೇಕಡ 69 ಭಾಗ ಹಿಮನದಿಗಳಲ್ಲೇ ಸಂಗ್ರಹವಾಗಿದೆ. ಎಲ್ಲ ಹಿಮನದಿಗಳೂ ಕರಗಿ ಅಷ್ಟೂ ನೀರು ಕಡಲಿಗೆ ಬೆರೆತರೆ ಜಗದಾದ್ಯಂತ ಇಡೀ ಸಾಗರಾವಾರದ ಮಟ್ಟ 300 ಅಡಿಗಳಷ್ಟು ಏರುತ್ತದೆ!

ಧರೆಯಲ್ಲಿ ಪ್ರಸ್ತುತ ಹಿಮನದಿಗಳ ವಿತರಣೆ ಹೀಗಿದೆ:

- ಪೃಥ್ವಿಯಲ್ಲಿರುವ ಎಲ್ಲ ಹಿಮನದಿಗಳ ಗರಿಷ್ಠ ಭಾಗ ಅಂಟಾರ್ಕ್ಟಿಕಾದಲ್ಲಿದೆ. ಧರೆಯಲ್ಲಿರುವ ಒಟ್ಟು ಎರಡು ಲಕ್ಷ ಹಿಮನದಿಗಳ ಶೇಕಡ 91 ಭಾಗ (ಎಂದರೆ 1,82,000 ಹಿಮನದಿಗಳು) ಇದೊಂದೇ ಭೂಖಂಡದಲ್ಲಿವೆ. ಇಲ್ಲಿರುವ ಹಿಮನದಿಗಳೆಲ್ಲ ಬಹುಪಾಲು ಕಾಂಟಿನೆಂಟಲ್ ಹಿಮನದಿಗಳೇ ಆಗಿವೆ.




- ಭೂಮಿಯಲ್ಲಿರುವ ಸಕಲ ಹಿಮನದಿಗಳ ಶೇಕಡ 8 ಭಾಗ (ಎಂದರೆ 16,000 ಹಿಮನದಿಗಳು) ಗ್ರೀನ್ ಲ್ಯಾಂಡ್‌ನಲ್ಲಿವೆ. ಇಲ್ಲಿನ ಹಿಮನದಿಗಳೂ ಬಹುತೇಕ ಕಾಂಟಿನೆಂಟಲ್ ಬಗೆಯವೇ ಆಗಿವೆ.
- ಉತ್ತರ ಅಮೆರಿಕ ಖಂಡದಲ್ಲಿ 1000 ಹಿಮನದಿಗಳಿವೆ. ಇವೆಲ್ಲ ಬಹುಪಾಲು ಆಲ್ಪೈನ್ ಬಗೆಯವೇ ಆಗಿವೆ. ಇದೇ ಭೂಖಂಡದಲ್ಲಿರುವ ಅಲಾಸ್ಕಾದಲ್ಲಿ ಎರಡೂ ಬಗೆಯ ಹಿಮನದಿಗಳಿವೆ.
- ಏಷ್ಯಾ ಖಂಡದಲ್ಲಿ 400 ಹಿಮನದಿಗಳಿವೆ. ದಕ್ಷಿಣ ಅಮೆರಿಕ, ಯೂರೋಪ್ ಮತ್ತು ಆಫ್ರಿಕಾ ಖಂಡ ಈ ಮೂರರಲ್ಲೂ ಸೇರಿ ಸುಮಾರು 200 ಹಿಮನದಿಗಳಿವೆ. ಇವೆಲ್ಲವೂ ಆಲ್ಪೈನ್ ಹಿಮನದಿಗಳೇ ಆಗಿವೆ.

■ ಎನ್. ವಾಸುದೇವ್